ಓಎಸ್ ನಂಃ 47/2017

DW-3

ಸಾಕ್ಷಿಯನ್ನು ದಿನಾಂಕ 23.01.2020 ರಂದು ಪುನಃ ಕರೆಸಿ ಪಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ SNN ವಕೀಲರಿಂದಃ

ನನಗೆ ಶ್ರೀಮತಿ ಅಮ್ಮ ರವರು ಅಜ್ಜಿಯಾಗಬೇಕು. ದಾವಾ ಆಸ್ತಿಗಳು ಶ್ರೀನಿವಾಸ ರಂಗನ್ ಮತ್ತು ಪಟ್ಟಾಭಿರಾಮನ್ ರವರ ಸ್ವಯಾರ್ಜಿತವಾದ ಆಸ್ತಿಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಕೊಟ್ಟಿದ್ದೇನೆ. ಐಟಂ ನಂಃ 10 ಮತ್ತು 11 ರ ಆಸ್ತಿಗಳು ಶ್ರೀನಿವಾಸ ರಂಗನ್ ಮತ್ತು ಪಟ್ಟಾಭಿರಾಮನ್ ರವರ ಸ್ವಯಾರ್ಜಿತವಾದ ಆಸ್ತಿಗಳು ಎಂದು ತೋರಿಸಲು ಕ್ರಯ ಪತ್ರಗಳನ್ನು ಹಾಜರು ಮಾಡಿದ್ದೇನೆ. ಕ್ರಯ ಪತ್ರಗಳನ್ನು ಬಿಟ್ಟು ಬೇರೆ ದಾಖಲಾತಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಕ್ರಯ ಪತ್ರಗಳಲ್ಲಿ, ನಮ್ಮ ಮಕ್ಕಳು ಸಂಪಾದನೆ ಮಾಡಿದಂತಹ ಹಣದಿಂದ ಆಸ್ತಿಗಳನ್ನು ಖರೀದಿ ಮಾಡಿದ್ದೇವೆ ಎಂದು ನಮೂದು ಇಲ್ಲ ಎಂದರೆ ಸರಿ. ಒಂದು ವೇಳೆ ನಾವು ಸಂಪಾದನೆ ಮಾಡಿ ಹಣ ಕೊಟ್ಟಿದ್ದರೆ ಅದನ್ನುಕ್ರಯ ಪತ್ರದಲ್ಲಿ ನಮೂದು ಮಾಡುತ್ತಿದ್ದೆವು ಎಂದರೆ, ಸಾಕ್ಷಿಯು ನಮ್ಮ ಹೆಸರಿಗೆ ಖಾತೆ ಇರಲಿಲ್ಲ, ಆದ್ದರಿಂದ ನಾವು ಖರೀದಿಸಲು ಆಗಲಿಲ್ಲ, ಅದನ್ನು ಶ್ರೀನಿವಾಸ್ ರಂಗನ್ ಮತ್ತು ಪಟ್ಟಾಭಿರಾಮನ್ ರವರ ಹೆಂಡತಿ ಸುಲೋಚನ ರವರ ಹೆಸರಿಗೆ ಖರೀದಿಸಿದ್ದೇವೆ ಎಂದು ನುಡಿಯುತ್ತಾರೆ. ನಾವು ಹಣ ಕೊಟ್ಟಿದ್ದರೆ ಅದನ್ನು ಕ್ರಯ ಪತ್ರದಲ್ಲಿ ನಮೂದು ಮಾಡುತ್ತಿದ್ದೆವು ಎಂದರೆ, ಅದರ ಅವಶ್ಯಕತೆ ಇರಲಿಲ್ಲ ಆದ್ದರಿಂದ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ದಾವಾ ಹಾಕುವ ಪೂರ್ವದಲ್ಲಿ ವಾದಿಗಳಿಂದ ನಾನು ನೋಟಿಸು ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿ ಸಂಪಾದನೆ ಹಣವನ್ನು ಆಸ್ತಿ ಖರೀದಿಮಾಡಲು ಕೊಡದೇ ಇದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇಳಿ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಗುಂಡ್ಲುಪೇಟೆ.